3. ವಿಷಯ : ಹೊಸದುರ್ಗ ತಾಲ್ಲೂಕಿನ ಮೊತ್ತೋಡ್ ಹೋಬಳಿ ದೊಡ್ಡಬಾಲ ಕೆರೆ ಗ್ರಾಮದ ಸರ್ವೆ ನಂ 59ರ ಸರ್ಕಾರಿ ಜಮೀನಿಗೆ ಅನಧಿಕೃತವಾಗಿ NOC ನೀಡಿರುವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಸಭಾಧ್ಯಕ್ಷರೆ, ಹೊಸದುರ್ಗ ತಾಲ್ಲೂಕಿನ ಮೊತ್ತೋಡ್ ಹೋಬಳಿ ದೊಡ್ಡಬ್ಯಾಲ ಕೆರೆ ಗ್ರಾಮದ ಸರ್ವೆ ನಂ. 59ರ ಸರ್ಕಾರಿ ಜಮೀನಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಾಂಗದ ದಲಿತ ರೈತರು ಉಳುಮೆ ಮಾಡತಕ್ಕಂಥ ಸಾಗುವಳಿ ಜಮೀನಿನಲ್ಲಿ ಕೆರೆಕಟ್ಟೆ ಸ್ಮಶಾನ ಇರತಕ್ಕಂಥ ಜಾಗದಲ್ಲಿ ಗಣಿಗಾರಿಕೆ ನಡೆಸುವುದಕ್ಕೆ ಕಂದಾಯ ಇಲಾಖೆಯಿಂದ ಅನಧಿಕೃತವಾಗಿ NOC ಯನ್ನು ಕೊಟ್ಟಿದ್ದಾರೆ. ಮ್ಯಾಪ್‌ಗಳನ್ನು ತಿರುಚಿ ಅನಧಿಕೃತವಾಗಿ NOC ಯನ್ನು ತೆಗೆದುಕೊಂಡು ಇವತ್ತಿನದಿವಸ ಆ ಗಣಿಗಾರಿಕೆಯನ್ನು ರಿನ್ಯೂವಲ್ ಮಾಡಿ, inclusion ಮಾಡಿ transfer ಕೂಡ ಆಗಿದೆ. ಆದ್ದರಿಂದ, ನಾನು ಹೇಳುವುದೇನೆಂದರೆ ಆ ರೀತಿ ಮಾಡಿರುವವರ ಮೇಲೆ ಗಣಿಗಾರಿಕೆಗೆ NOC ಕೊಟ್ಟಿರುವಂಥ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಇದು ಬಹಳ ಗಂಭೀರವಾದಂಥ ವಿಚಾರವಾಗಿರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಬೆಂಗಳೂರು ಜಲಮಂಡಳಿ ಸಚಿವರು) : ಮಾನ್ಯ ಅಧ್ಯಕ್ಷರೆ, ಹೊಸದುರ್ಗ ತಾಲ್ಲೂಕಿನ ಮೊತ್ತೋಡ್ ಹೋಬಳಿ ದೊಡ್ಡಬ್ಯಾಲ ಕೆರೆ, ಇಲ್ಲಿ ಗಣಿಗಾರಿಕೆಗೆ ಅವಕಾಶ ಕಲ್ಪಿಸಿರುವ ಬಗ್ಗೆ ಮತ್ತು ಕಂದಾಯ ಇಲಾಖೆಯಿಂದ no objection certificate ಕೊಟ್ಟು ಗಣಿಗಾರಿಕೆಗೆ ಅವಕಾಶ ಕೊಟ್ಟದ್ದು ಇದರಿಂದ ಆಗುತ್ತಿರುವ ತೊಂದರೆ ಬಗ್ಗೆ ಹಾಗೂ ಇದರ ಅವ್ಯವಹಾರದ ಬಗ್ಗೆ ಕಂದಾಯ ಇಲಾಖೆಯ ಅಧಿಕಾರಿಗಳು ಕ್ರಮ ಜರುಗಿಸಬೇಕೆಂದು ಸನ್ಮಾನ್ಯ ಶಾಸಕರಾದ ಶ್ರೀ ಗೂಳಿಹಟ್ಟಿ ಡಿ. ಶೇಖರ್‌ರವರು ಹೇಳಿದ್ದಾರೆ. ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಬಹಳ ಮುಖ್ಯವಾದ ವಿಚಾರವನ್ನು ಪ್ರಸ್ತಾಪ

ಮಾಡಿದ್ದಾರೆ. ಈ ವಿಷಯವನ್ನು ಸನ್ಮಾನ್ಯ ಕಂದಾಯ ಇಲಾಖೆಯ ಸಚಿವರ ಗಮನಕ್ಕೆ ತಂದು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಅಲ್ಲಿ ಇರುವವರು ಬಹಳ ಉನ್ನತ ಸ್ಥಾನದಲ್ಲಿದ್ದಾರೆ. ಆದ್ದರಿಂದ ದಯಮಾಡಿ ಅದನ್ನೂ ಸಹ ತಾವು consider ಮಾಡಬೇಕು.

4. ವಿಷಯ : ಸರ್ಕಾರಿ ಪ್ರೌಢಶಾಲೆಗಳಲ್ಲಿ ಮಾಹಿತಿ ಸಿಂಧು ಯೋಜನೆ ಅಡಿಯಲ್ಲಿ ಕಂಪ್ಯೂಟರ್ ಶಿಕ್ಷಣ ನೀಡುತ್ತಿದ್ದ ಶಿಕ್ಷಕರನ್ನು ಪುನರ್ ನೇಮಕಾತಿ ಮಾಡಿಕೊಳ್ಳುವ ಬಗ್ಗೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಸರ್ಕಾರಿ ಪ್ರೌಢಶಾಲೆಗಳಲ್ಲಿ ಮಾಹಿತಿ ಸಿಂಧು ಯೋಜನೆ ಅಡಿಯಲ್ಲಿ ಕಂಪ್ಯೂಟರ್ ಶಿಕ್ಷಣ ಎಂದು ಮಾಡಲಾಗಿತ್ತು. ಅಲ್ಲಿ ಕೆಲವು ಶಿಕ್ಷಕರು ಕೆಲಸ ಮಾಡುತ್ತಿದ್ದರು. ಹೈಸ್ಕೂಲ್‌ನಲ್ಲಿ ಇದು ಬಹಳ ಜನಪ್ರಿಯ ಕಾರ್ಯಕ್ರಮವೆಂದು ನಡೆಯುತ್ತಿತ್ತು. ಅಲ್ಲಿದ್ದಂತಹ ಶಿಕ್ಷಕರನ್ನು ಈಗ ತೆಗೆದು ಹಾಕಿದ್ದಾರೆ. ಈಗ ಅವರೆಲ್ಲ ಬೀದಿಪಾಲಾಗಿದ್ದಾರೆ. ಅವರಲ್ಲಿ ಕೆಲವರಿಗೆ ಮದುವೆ ಆಗಿದೆ. ಅವರಿಗೆ ಹೆಂಡತಿ ಮಕ್ಕಳು ಇದ್ದಾರೆ. ಈಗ ಅವರು ಬೀದಿಪಾಲಾಗಿದ್ದು ಅವರಿಗೆ ಯಾವುದೇ ಉದ್ಯೋಗ ಇಲ್ಲದೆ ಇರುವುದರಿಂದ ಅವರೆಲ್ಲರೂ ಬಹಳ ತೊಂದರೆಯಲ್ಲಿದ್ದಾರೆ. ಅವರಿಗೆ ಸಂಬಂಧಪಟ್ಟಂತೆ ಫೈಲ್ ಏನೋ move ಆಗುತ್ತಿದೆ ಎಂದು ಹೇಳಿದ್ದಾರೆ. ಆಂದರೆ ಹೊಸದಾಗಿ recruitment rules ಮಾಡಿ ಅವರಿಗೆ ಉದ್ಯೋಗ ಸೃಷ್ಟಿ ಮಾಡಿ ಅವರೆಲ್ಲರನ್ನು ತೆಗೆದುಕೊಳ್ಳುವುದಕ್ಕೆ ಏನೋ ಪ್ರಯತ್ನ ನಡೆಯುತ್ತಿದೆಯಂತೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಏನಾದರೂ ಆಲೋಚನೆ ಮಾಡಿದೆಯೇ ? ಸರ್ಕಾರಿ ಪ್ರೌಢಶಾಲೆಯಲ್ಲಿ ಮತ್ತೆ ಮಾಹಿತಿ ಸಿಂಧು ಯೋಜನೆ ಅಡಿಯಲ್ಲಿ ಕಂಪ್ಯೂಟರ್ ಶಿಕ್ಷಣ ಕೊಡತಕ್ಕಂಥದು ಮತ್ತು ಇವರನ್ನೆ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳತಕ್ಕಂಥದು. ಮಾಡಿದರೆ ಅವರ ಜೀವನಕ್ಕೆ ಒಂದು security ಕೊಟ್ಟಂತೆ ಆಗುತ್ತದೆ. ಹಾಗೆಯೇ ಅವರೂ ಕೂಡ ಬದುಕುವುದಕ್ಕೆ ಅನುಕೂಲ. ಆಗುತ್ತದೆ. ಆದ್ದರಿಂದ, ಅದರ ಬಗ್ಗೆ